# ಪೌರತ್ವ ಬಿಲ್‌ಗೆ ಸಂಪುಟ ಸಮ್ಮತಿ

ಕ.ಪ್ರ 5/12/19

## ನೆರೆ ದೇಶಗಳ ಮುಸ್ಲಿಮೇತರರಿಗೆ ಭಾರತೀಯ ಪೌರತ್ವ ನೀಡುವ ಕರಡು ಮಸೂದೆಗೆ ಅನುಮೋದನೆ
## 2 ದಿನದಲ್ಲಿ ಸಂಸತ್ತಿನಲ್ಲಿ ಮಂಡನೆ, ಮುಂದಿನ ವಾರ ಅಂಗೀಕಾರ ಸಂಭವ | ವಿಪಕ್ಷಗಳ ತೀವ್ರ ವಿರೋಧ

**ನವದೆಹಲಿ:** ಪಾಕಿಸ್ತಾನ, ಬಾಂಗ್ಲಾದೇಶ ಹಾಗೂ ಆಫ್ಘಾನಿಸ್ತಾನದ ಮುಸ್ಲಿಮೇತರ ನಿರಾಶ್ರಿತರಿಗೆ ಭಾರತದಲ್ಲಿ ಆಶ್ರಯ ನೀಡುವುದಕ್ಕೆ ಅವಕಾಶ ಕಲ್ಪಿಸುವ ವಿವಾದಿತ ಪೌರತ್ವ ತಿದ್ದುಪಡಿ ಮಸೂದೆಗೆ ಕೇಂದ್ರ ಸಚಿವ ಸಂಪುಟ ಸಭೆ ಬುಧವಾರ ಅನುಮೋದನೆ ನೀಡಿದೆ. ಇದರಿಂದಾಗಿ ಈ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡನೆ ಮಾಡಲು ಹಾದಿ ಸುಗಮವಾಗಿದೆ.

ಇನ್ನೆರಡು ದಿನದಲ್ಲಿ ಸರ್ಕಾರ ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡನೆ ಮಾಡುವ ಸಾಧ್ಯತೆ ಇದೆ. ಮುಂದಿನ ವಾರದೊಳಗಾಗಿ ಸಂಸತ್ತಿನ ಅಂಗೀಕಾರ ಪಡೆದುಕೊಳ್ಳುವ ವಿಶ್ವಾಸದಲ್ಲೂ ಇದೆ.

ಈಗಾಗಲೇ ಈಶಾನ್ಯ ರಾಜ್ಯಗಳು ಹಾಗೂ ಪಶ್ಚಿಮ ಬಂಗಾಳ ಸರ್ಕಾರ ಈ ವಿಧೇಯಕಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿಕೊಂಡು ಬಂದಿವೆ. ಅದೆಲ್ಲವನ್ನೂ ಉಪೇಕ್ಷಿಸಿ ಕೇಂದ್ರ ಸಚಿವ ಸಂಪುಟ ಸಭೆ ವಿಧೇಯಕಕ್ಕೆ ಒಪ್ಪಿಗೆ ನೀಡಿರುವುದು ಪ್ರತಿಪಕ್ಷಗಳ ಆಕ್ರೋಶಕ್ಕೆ ಕಾರಣವಾಗಿದೆ. ಇದೊಂದು ವಿಭಜನಕಾರಿ ಹಾಗೂ ಕೋಮುವಾದಿ ಮಸೂದೆಯಾಗಿದೆ ಎಂದು ಟೀಕಿಸಿವೆ. ಲೋಕಸಭೆಯಲ್ಲಿ ಭಾರಿ ಬಹುಮತ ಹೊಂದಿರುವ ಸರ್ಕಾರಕ್ಕೆ ಈ ವಿಧೇಯಕ ಅಂಗೀಕರಿಸಲು ಯಾವುದೇ ಸಮಸ್ಯೆಯಾಗುವುದಿಲ್ಲ. ರಾಜ್ಯಸಭೆಯಲ್ಲಿ ಸಂಖ್ಯಾಬಲ ಕೊರತೆ ಇದ್ದರೂ ಬಿಜೆಡಿ, ಟಿಆರ್‌ಎಸ್ ಹಾಗೂ ವೈಎಸ್ಸಾರ್ ಕಾಂಗ್ರೆಸ್ ಪಕ್ಷಗಳ ಬೆಂಬಲ ಪಡೆಯಲು ತೀರ್ಮಾನಿಸಿದೆ.

**ಲಾಭ ಏನು?:** ಈ ವಿಧೇಯಕ ಕಾಯ್ದೆಯಾಗಿ ಬದಲಾದರೆ, ಧಾರ್ಮಿಕ ಕಿರುಕುಳದ ಕಾರಣಕ್ಕೆ ಪಾಕಿಸ್ತಾನ, ಬಾಂಗ್ಲಾದೇಶ, ಆಫ್ಘಾನಿಸ್ತಾನ ತೊರೆದು ಬಂದು ಭಾರತದಲ್ಲಿ ನೆಲೆಯೂರಿರುವ ನಿರಾಶ್ರಿತರಿಗೆ ಸುರಕ್ಷತೆ ಸಿಗಲಿದೆ. ಮುಂದೆ ಬರುವವರಿಗೂ ಸುಲಭವಾಗಿ ಪೌರತ್ವ ಲಭ್ಯವಾಗಲಿದೆ. ಶೀಘ್ರದಲ್ಲೇ ಸರ್ಕಾರ ರಾಷ್ಟ್ರೀಯ ಪೌರತ್ವ ನೋಂದಣಿ ನಡೆಸಲು ಉದ್ದೇಶಿಸಿದ್ದು, ಆಗಲೂ ನಿರಾಶ್ರಿತರಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ.

**ವಿರೋಧ ಏಕೆ?:** ಈಶಾನ್ಯ ರಾಜ್ಯಗಳಲ್ಲಿ ನೆರೆ ದೇಶಗಳ ಸಾಕಷ್ಟು ಸಂಖ್ಯೆಯ ಜನರು ಈಗಾಗಲೇ ನೆಲೆಯೂರಿದ್ದಾರೆ. ಅವರಲ್ಲಿ ಮುಸ್ಲಿಮರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಈ ವಿಧೇಯಕ ಜಾರಿಯಾದರೆ, ಅವರು ಅತಂತ್ರರಾಗಲಿದ್ದಾರೆ. ಜತೆಗೆ ಈಶಾನ್ಯ ರಾಜ್ಯಗಳಲ್ಲಿ ವಲಸೆ ಸಮಸ್ಯೆ ಹೆಚ್ಚಿದೆ. ಅದನ್ನು ನಿಯಂತ್ರಿಸಲು ಯತ್ನಿಸುತ್ತಿರುವಾಗಲೇ, ಪೌರತ್ವ ನೀಡಲು ಸರ್ಕಾರ ನಿರ್ಧರಿಸಿದರೆ ವಲಸೆ ಮತ್ತಷ್ಟು ಹೆಚ್ಚಾಗುತ್ತದೆ ಎಂಬ ಆತಂಕವಿದೆ. ಮತ್ತೊಂದೆಡೆ, ಧರ್ಮದ ಆಧಾರದಲ್ಲಿ ಕೇಂದ್ರ ಸರ್ಕಾರ ಪೌರತ್ವ ನೀಡುತ್ತಿರುವುದು ಪ್ರತಿಪಕ್ಷಗಳ ವಿರೋಧಕ್ಕೆ ಕಾರಣವಾಗಿದೆ.

# ವೈಯಕ್ತಿಕ ಮಾಹಿತಿ ರಕ್ಷಣೆಗೆ ಕಾನೂನಿನ ಬಲ

## ಗಂಭೀರ ಸ್ವರೂಪದ ಮಾಹಿತಿ ಉಲ್ಲಂಘನೆಗೆ 15 ಕೋಟಿ ರು. ದಂಡ, ಜೈಲು

**ನವದೆಹಲಿ:** ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಎಂಬ ಸಂಸ್ಥೆ ಪೆಗಾಸಸ್ ಎಂಬ ಬೇಹುಗಾರಿಕಾ ಸಾಫ್ಟ್‌ವೇರ್ ಬಳಸಿ ಭಾರತದ ಮಾನವ ಹಕ್ಕುಗಳ ಹೋರಾಟಗಾರರು ಮತ್ತು ಪತ್ರಕರ್ತರ ಮೊಬೈಲ್‌ಗೆ ಕನ್ನಹಾಕಿದ ವಿಚಾರ ಬಹಿರಂಗವಾದ ಬೆನ್ನಲ್ಲೇ, ವೈಯಕ್ತಿಕ ಮಾಹಿತಿ ರಕ್ಷಣಾ ಮಸೂದೆಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಈ ಪ್ರಕಾರ, ಗಂಭೀರ ಉಲ್ಲಂಘನೆ ಪ್ರಕರಣಗಳಲ್ಲಿ 15 ಕೋಟಿ ರು.ವರೆಗೂ ಅಥವಾ ಕಂಪನಿಯ ಜಾಗತಿಕ ವಹಿವಾಟಿನ ಶೇ.4ರಷ್ಟು ದಂಡ ಹಾಗೂ ಸಾಮಾನ್ಯ ಉಲ್ಲಂಘನೆಗಳ ಪ್ರಕರಣಗಳಲ್ಲಿ 5 ಕೋಟಿ ರು. ಅಥವಾ ಜಾಗತಿಕ ವಹಿವಾಟಿನ ಶೇ.2ರಷ್ಟು ದಂಡ ವಿಧಿಸಲಾಗುತ್ತದೆ. ಅಲ್ಲದೆ, ಜನ ಸಾಮಾನ್ಯರ ಮಾಹಿತಿಗಳನ್ನು ದುರುಪಯೋಗ ಮಾಡಿದ ಪ್ರಕರಣದಲ್ಲಿ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಮಾಹಿತಿ ಮಾರಾಟ ಉದ್ಯಮದಲ್ಲಿ ತೊಡಗಿದ ಕಂಪನಿಯ ಕಾರ್ಯನಿರ್ವಾಹಕ ಉಸ್ತುವಾರಿಗೆ 3 ವರ್ಷದವರೆಗೂ ಜೈಲು ಶಿಕ್ಷೆ ವಿಧಿಸುವ ಪ್ರಸ್ತಾಪ ವೈಯಕ್ತಿಕ ಮಾಹಿತಿ ರಕ್ಷಣಾ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಈ ಕುರಿತಾದ ವಿಧೇಯಕ ಪ್ರಸ್ತುತದ ಚಳಿಗಾಲದ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಮಂಡಿಸುವ ಸಾಧ್ಯತೆಯಿದೆ.

ಈ ಪ್ರಕಾರ ಇಂಟರ್ನೆಟ್ ಕಂಪನಿಗಳು ಜನ ಸಾಮಾನ್ಯರ ನಿರ್ಣಾಯಕ ಮಾಹಿತಿಗಳನ್ನು ಭಾರತದಲ್ಲೇ ಶೇಖರಣೆ ಮಾಡಬೇಕು. ಅಲ್ಲದೆ, ಸೂಕ್ಷ್ಮ ವಿಚಾರಗಳ ಕುರಿತಾದ ಮಾಹಿತಿಗಳನ್ನು ಮಾಹಿತಿದಾರನ ಮಾಲೀಕನ ಒಪ್ಪಿಗೆ ಮೇರೆಗೆ ಬಾಹ್ಯ ದೇಶಗಳಲ್ಲಿ ಸಂರಕ್ಷಿಸಿಡಬಹುದು. ಆದರೆ, ದೇಶದ ಸಾರ್ವಭೌಮ, ರಾಷ್ಟ್ರೀಯ ಭದ್ರತೆ, ನ್ಯಾಯಾಲಯದ ಆದೇಶ ಸೇರಿದಂತೆ ಇನ್ನಿತರ ವಿಚಾರಗಳು ವೈಯಕ್ತಿಕ ಮಾಹಿತಿ ರಕ್ಷಣಾ ಕಾಯ್ದೆಗೆ ಒಳಪಡುವುದಿಲ್ಲ ಎಂದು ಮೂಲಗಳು ತಿಳಿಸಿವೆ.

# ಎಸ್ಸಿ/ಎಸ್ಟಿ ಮೀಸಲು ಮತ್ತೆ 10 ವರ್ಷ ವಿಸ್ತರಣೆ

## ಲೋಕಸಭೆ, ವಿಧಾನಸಭೆಗೆ ಅನ್ವಯ | ಆಂಗ್ಲೋ ಇಂಡಿಯನ್ ಮೀಸಲಿಗೆ ಕೊಕ್?

**ನವದೆಹಲಿ:** ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಇದ್ದ ಮೀಸಲಾತಿಯನ್ನು ಇನ್ನೂ 10 ವರ್ಷಗಳ ಕಾಲ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ನಿರ್ಧಾರ ಮಾಡಿದೆ. ಇದೇ ವೇಳೆ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ನೀಡುತ್ತಿದ್ದ ಮೀಸಲನ್ನು ಕೈಬಿಡಲಾಗಿದೆ ಎನ್ನಲಾಗಿದೆ.

ಎಸ್‌ಟಿ- ಎಸಿ ಸಮುದಾಯ ಮೀಸಲು 2020ರ ಜ.25ರಂದು ಕೊನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಅದನ್ನು ವಿಸ್ತರಿಸುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ. ಸದ್ಯ ಲೋಕಸಭೆಯಲ್ಲಿ ಪರಿಶಿಷ್ಟ ಜಾತಿಗೆ 84 ಹಾಗೂ ಪರಿಶಿಷ್ಟ ಪಂಗಡಕ್ಕೆ 47 ಸ್ಥಾನ ಮೀಸಲಿಡಲಾಗಿದೆ. ಅದೇ ರೀತಿ ವಿವಿಧ ರಾಜ್ಯಗಳ ವಿಧಾನಸಭೆಯಲ್ಲಿ ಎಸ್ಸಿ ಸಮುದಾಯಕ್ಕೆ 614 ಮತ್ತು ಎಸ್‌ಟಿ ಸಮುದಾಯಕ್ಕೆ 554 ಸ್ಥಾನಗಳನ್ನು ಮೀಸಲಿಡಲಾಗಿದೆ.

ಇದೇ ವೇಳೆ ಆಂಗ್ಲೋ ಇಂಡಿಯನ್ ಸಮುದಾಯದ ಸ್ಥಿತಿ ಉತ್ತಮವಾಗಿರುವ ಹಿನ್ನಲೆಯಲ್ಲಿ ಅವರಿಗೆ ಮೀಸಲು ನೀಡದೇ ಇರುವ ನಿರ್ಧಾರಕ್ಕೆ ಸರ್ಕಾರ ಬಂದಿದೆ ಎನ್ನಲಾಗಿದೆ.